೭) ಇಲಾಖೆಯಲ್ಲಿ ಶುಶ್ರೂಷಾ ಅಧೀಕ್ಷಕರ ದರ್ಜೆ-೧ ಎಲ್ಲಾ ಹುದ್ದೆ ಭರ್ತಿ ಮಾಡಲಾಗಿದೆ.

೮) ೬೦೦ ಶುಶ್ರೂಷಾ ದಾದಿಯರಿಗೆ ಹಿರಿಯ ಶುಶ್ರೂಷಾ ದಾದಿಯರೆಂದು ಮೇಲ್ದರ್ಜೆಗೇರಿಸಿದೆ.

೯) ಶುಶ್ರೂಷಾ ವರ್ಗದಲ್ಲಿ ಈಗಿರುವ ಅತಿ ಹೆಚ್ಚಿನ ಹುದ್ದೆ, ಹಿರಿಯ ಸಹಾಯಕ ಶುಶ್ರೂಷಾ ನಿರ್ದೇಶಕರ ಹುದ್ದೆ ಭರ್ತಿ ಮಾಡಿದೆ.

ಈಗಿರುವಲ್ಲಿ, ಸಂಘಕ್ಕೆ ಸರ್ಕಾರ ಮಲ ತಾಯಿ ಧೋರಣೆ ತೋರಿದೆ ಎಂಬುದಗಲ್ಲಿ ಸತ್ಯಾಂಶವಿಲ್ಲ.

೬) ಗೇಣೀದಾರರಿಗೆ ಭೂಮಿಯನ್ನು ಒದಗಿಸುವ ಬಗ್ಗೆ

ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು)- ಮಾನ್ಯ ಅಧ್ಯಕ್ಷರೇ, ಭೂ ಸುಧಾರಣಾ ಕಾಯಿದೆಯ ಅನ್ವಯ ಒಕ್ಕಲುದಾರರಿಗೆ ಸಿಗಬೇಕಾದ ಭೂಮಿಯ ಬಗ್ಗೆ ಹೆಚ್ಚಿನ ಕೇಸುಗಳಿಗೆ ಹೈಕೋರ್ಟಿನಲ್ಲಿ ಅಪೀಲು ಇದ್ದು ಪುನ: ಅದು ಭೂನ್ಯಾಯ ಮಂಡಲಿಗೆ ಮರು ತನಿಖೆಗೆ ಬಂದಂತಹ ಸಂದರ್ಭದಲ್ಲಿ ಭೂನ್ಯಾಯ ಮಂಡಳಿಗಳು, ರೆಕಾರ್ಡು ಇಲ್ಲದೆ ಇರುವುದರಿಂದ, ತಮಗೆ ಸಿಕ್ಕಿದ ಭೂಮಿಯನ್ನು ಮರಳಿ ಭೂ ಮಾಲೀಕರಿಗೆ ಕೊಡುವಂತಹ ಪರಿಸ್ಥಿತಿ ಉದ್ಭವವಾಗಿದೆ. ಭೂ-ನ್ಯಾಯ ಮಂಡಲಿಗಳು ಸಾಕ್ಷಿ ಆಧಾರ, ತನಿಖೆ ಆಧಾರಗಳನ್ನು ಹೆಚ್ಚಾಗಿ ಗಣನೆಗೆ ತೆಗೆದುಕೊಳ್ಳುವುದಿಲ್ಲ, ಗೇಣೀದಾರರಲ್ಲಿ ಹೆಚ್ಚಾಗಿ ರೆಕಾರ್ಡುಗಳು ಇಲ್ಲದಂತಹವರೇ ಜಾಸ್ತಿ. ಇದರಿಂದ ನಿಜವಾದ ಗೇಣಿದಾರರಿಗೆ ತುಂಬಾ ಅನ್ಯಾಯವಾಗುತ್ತದೆ. ಭೂ ಮಾಲೀಕರು ವಕೀಲರ ಮುಖಾಂತರ ಬೇಕಾದ ರೀತಿಯಲ್ಲಿ ರೆಕಾರ್ಡುಗಳನ್ನು ಬಳಸಿಕೊಂಡು, ಭೂನ್ಯಾಯ ಮಂಡಲಿಯ ಎದುರು ವಾದ ಮಾಡುವ ಪರಿಸ್ಥಿತಿ ಇರುವುದು. ಅದೇ ರೀತಿಯಲ್ಲಿ ಕೃಷಿ ಕೂಲಿಗಳಿಗೆ ಕೊಡುವಂತಹ ವಾಸ ಮಾಡುವ, ವಾಸ ಸ್ಥಳವನ್ನು ಕೊಡುವಂತಹ ಒಂದು ಕಾಯಿದೆಗೆ ಅರ್ಜಿ ಕೊಡುವ ಅವಧಿ ಮುಗಿದು ಹೋಗಿ, ಸರಿಯಾದ ತಿಳುವಳಿಕೆ ಇದರ ಬಗ್ಗೆ ತಿಳಿಯದೇ ಹೆಚ್ಚಿನ ಕೃಷಿ ಕಾರ್ಮಿಕರಿಗೆ ಮುಖ್ಯವಾಗಿ ಹರಿಜನ ಗಿರಿಜನ ಹಾಗೂ ಆರ್ಥಿಕ ಮಟ್ಟದಲ್ಲಿ ಹಿಂದುಳಿದ ವರ್ಗದವರಿಗೆ, ಅವಧಿಗೆ ಸರಿಯಾಗಿ ಅರ್ಜಿ ಕೊಡಲು ಅಸಾಧ್ಯವಾಗಿದೆ. ಆದುದರಿಂದ ಮಾನ್ಯ ಕಂದಾಯ ಮಂತ್ರಿಗಳಿಗೆ ನಾನು ತಮ್ಮ ಮುಖಾಂತರ ಒತ್ತಾಯ ತರುತ್ತೇನೆ, ಬಹು ದಿನದಿಂದ ಒಕ್ಕಲುತನ ಮಾಡಿಕೊಂಡು ಬಂದಂತಹ ನಿಜವಾದ ಗೇಣೀದಾರರಿಗೆ ಭೂಮಿ ಸಿಗುವಂತೆ ಎಲ್ಲಾ ರೀತಿಯಲ್ಲಿ ತನಿಖೆ ನಡೆಸುವಂತೆ ನಿರ್ದೇಶನವನ್ನು ಕೊಡುವುದರ ಮೂಲಕ ಗೇಣಿದಾರರಿಗೆ ನ್ಯಾಯ ದೊರಕಿಸಿ ಕೊಡಬೇಕಾಗಿ ಹಾಗೂ ಕೃಷಿ ಕೂಲಿ ಕೊಡಲು ಬಾಕಿ ಉಳಿದಿರುವವರಿಗೆ ಇನ್ನೂ ಅವಕಾಶವನು ಕೊಟ್ಟು ಮುಂದುವರಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಕಾರ್ಮಿಕ ಸಚಿವರು)-- ಮಾನ್ಯ ಅಧ್ಯಕ್ಷರೇ, ಭೂ ಸುಧಾರಣಾ ಕಾಯಿದೆ ಅನ್ವಯ, ಒಕ್ಕಲುದಾರರಿಗೆ ಸಿಗಬೇಕಾದ ಭೂಮಿಯ ಬಗ್ಗೆ, ಹೆಚ್ಚಿನ ಕೇಸುಗಳಿಗೆ ಹೈಕೋರ್ಟಿನಲ್ಲಿ ಅಪೀಲು ಇದ್ದು. ಪುನಃ ಅದು ಭೂನ್ಯಾಯ ಮಂಡಲಿಗೆ ಮರು ತನಿಖೆಗೆ ಬಂದಂತಹ ಸಂದರ್ಭದಲ್ಲಿ ಭೂ ನ್ಯಾಯ ಮಂಡಲಿಗಳಲ್ಲಿ ರೆಕಾರ್ಡ್ ಇಲ್ಲದೇ ಇರುವುದರಿಂದ ತಮಗೆ ಸಿಕ್ಕಿದ ಭೂಮಿಯನ್ನು ಮರಳಿ ಭೂ ಮಾಲೀಕರಿಗೆ ಕೊಡುವಂತಹ ಪರಿಸ್ಥಿತಿ ಉದ್ಭವವಾಗಿದೆ ಎಂದು ಹೇಳಿದ್ದಾರೆ. ಆ ರೀತಿ ಪರಿಸ್ಥಿತಿ ಉದ್ಭವವಾಗಿರುವುದಿಲ್ಲ. ಈ ರೀತಿ ಹಿಯರಿಂಗ್‌ಗಳನ್ನು ತೆಗೆದುಕೊಳ್ಳುವುದಿಲ್ಲ. ಭೂ ನ್ಯಾಯ ಮಂಡಲಿಗಳು, ಅವಶ್ಯಕತೆ ಇದ್ದರೆ ಸ್ಥಳ ಪರೀಕ್ಷೆ ನಡೆಸಿ, ಸಾಕ್ಷ್ಯಾಧಾರಗಳನ್ನು ಗಣನೆಗೆ ತೆಗೆದುಕೊಂಡು ತಮ್ಮ ತೀರ್ಮಾನವನ್ನು ಹೇಳುವುದು ಇರುವ ಪದ್ಧತಿ. ನಿಜವಾದ ಗೇಣಿದಾರರಿಗೆ. ಹೆಚ್ಚಾಗಿ ದಾಖಲೆಗಳು ಇಲ್ಲದೆ ಅನ್ಯಾಯವಾಗುತ್ತಿದೆ ಎಂಬ ಸದಸ್ಯರ ವಾದ ಸರಿಯಲ್ಲ. ಏಕೆಂದರೆ ಪಹಣಿ ಪಟ್ಟಿಯಲ್ಲಿ ಗೇಣಿದಾರರ ಹೆಸರು ಇದ್ದಲ್ಲಿ, ಅದು ಮುಖ್ಯವಾದ ದಾಖಲೆ ಎಂದು ಪರಿಗಣಿಸಲಾಗುವುದು. ಭೂ ಮಾಲೀಕರು ವಕೀಲರ ಮುಖಾಂತರ ತಮಗೆ ಅನುಕೂಲವಾಗುವ ರೀತಿಯಲ್ಲಿ ರೆಕಾರ್ಡ್‌ಗಳನ್ನು ಬಳಸಿಕೊಂಡು, ಭೂ ನ್ಯಾಯ ಮಂಡಲಿಯ ಮುಂದೆ ವಾದ ಮಾಡುವ ಪರಿಸ್ಥಿತಿ ಇದೆಯೆಂದು ಮಾನ್ಯ ಸದಸ್ಯರು ವಾದ ಮಾಡುವುದು ಸರಿಯಲ್ಲ. ಏಕೆಂದರೆ, ಕರ್ನಾಟಕ ಭೂ ಸುಧಾರಣಾ ಆಕ್ಟ್ ೧೯೬೧, ಸೆಕ್ಷನ್ ೪೮ರ ಪ್ರಕಾರ, ನ್ಯಾಯವಾದಿಯಾಗಲೀ, ವಕೀಲರಾಗಲೀ, ಭೂ ನ್ಯಾಯ ಮಂಡಲಿಯ ಮುಂದೆ ವಾದಿಸುವುದನ್ನು ನಿಷೇಧಿಸಲಾಗಿದೆ. ಒಂದು ವೇಳೆ ಯಾರಿಗಾದರೂ ಅನ್ಯಾಯ ಆದಲ್ಲಿ, ಆಗ ಜಿಲ್ಲಾ ಭೂ ಸುಧಾರಣಾ ಅಪೀಲು ವಿಭಾಗಕ್ಕೆ ಅಪೀಲು ಸಲ್ಲಿಸ

ಬಹುದು. ಆಗ ಅಲ್ಲಿ ವಕೀಲರು ವಾದಿಸಬಹುದು. ಭೂ ಸುಧಾರಣಾ ತಿದ್ದುಪಡಿ ಕಾಯಿದೆ ೧೯೭೮, ಸರ್ಕಾರದ ಗೆಜೆಟ್‌ನಲ್ಲಿ ಪ್ರಕಟವಾದ ದಿನದಿಂದಲೇ, ಕೃಷಿ ಕಾರ್ಮಿಕರು, ಭೂಮಾಲೀಕರು, ಯಾವ ಜಾಗದಲ್ಲಿ ವಾಸ ಮಾಡುತ್ತಿದ್ದರು, ಆ ಸ್ಥಳವನ್ನು ೫ ಸೆಂಟಿಗೆ ಮೀರದಂತೆ, ತಮಗೆಬೇಕೆಂದು ರಿಜಿಸ್ಟರ್ ಮಾಡಿಕೊಳ್ಳಲು ಕಾಲಾವಧಿಯನ್ನು ದಿನಾಂಕ ೩೧-೧೨-೭೯ರವರೆಗೆ ಕೊಡಲಾಗಿತ್ತು. ಇದನ್ನು ದಿನಾಂಕ ೩೧-೧೨-೮೧ರವರೆಗೆ ವಿಸ್ತರಿಸಲಾಯಿತು. ಪುನಃ ಈ ಕಾಲಾವಧಿಯನ್ನು ದಿನಾಂಕ ೩೧-೩-೧೯೮೩ರವರೆಗೆ ವಿಸ್ತರಿಸಲಾಯಿತು. ಈ ತಿದ್ದುಪಡಿ ಕಾಯಿದೆ ೧-೧-೭೯ರಲ್ಲಿ ಜಾರಿಯಾಗಿದ್ದರೂ, ಕರ್ನಾಟಕ ಭೂ ಸುಧಾರಣಾ ಕಾಯಿದೆ ೧೯೬೧ನೇ ಸೆಕ್ಷನ್ ೩೮ರ ಮೇರೆಗೆ ಕೃಷಿ ಕಾರ್ಮಿಕರು ಅರ್ಜಿಯನ್ನು ಬರೆದುಕೊಳ್ಳಲು ಕಾಲಾವಧಿಯನ್ನು ದಿನಾಂಕ ೩೧-೩-೧೯೮೦ರವರೆಗೆ ವಿಸ್ತರಿಸಲಾಯಿತು ಪುನಃ ವಿಸ್ತರಣೆ ಮಾಡುವ ಅವಶ್ಯಕತೆ ಇಲ್ಲ.

(7) ಗಜೇಂದ್ರಗಢ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಪ್ರಾಧ್ಯಾಪಕರಿಲ್ಲದೆ ತೊಂದರೆಯಾಗಿರುವ ವಿಚಾರ.

ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಅಧ್ಯಕ್ಷರೇ, ಧಾರವಾಡ ಜಿಲ್ಲೆಯ ರೋಣ ತಾಲ್ಲೂಕು ಗಜೇಂದ್ರಗಢದ ಸರಕಾರಿ ಪ್ರಥಮದರ್ಜೆಯ ಕಾಲೇಜಿನಲ್ಲಿ ಪ್ರಾಧ್ಯಾಪಕರಿಲ್ಲದೆ ಇಂಗ್ಲೀಷ್ ಇತ್ಯಾದಿ ವಿಷಯಗಳ ಬೋಧನೆಗೆ ತೊಂದರೆಯಾಗಿದ್ದು, ಪ್ರಾಚಾರ್ಯರೂ ಕೂಡಾ ಸರಿಯಾಗಿ ಆಡಳಿತ ನಡೆಸದೇ ಇದ್ದುದ್ದು ಅಲ್ಲಿಯ ವಿದ್ಯಾರ್ಥಿ ಸಮೂಹದಲ್ಲಿ ಅಸಂತೋಷವನ್ನುಉಂಟು ಮಾಡಿದೆ. ತೀವ್ರ ಕ್ರಮ ಕೈಗೊಳ್ಳದಿದ್ದರೆ, ವಿದ್ಯಾರ್ಥಿ ಸಮುದಾಯದಲ್ಲಿನ ಅಸಂತೋಷ ಸ್ಫೋಟಗೊಂಡು ವಿಷಮ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಶ್ರೀ ಡಿ ಮಂಜುನಾಥ್ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ, ಈ ವಿಷಯ ನನ್ನ ಗಮನಕ್ಕೆ ಬಂದಿದೆ. ಕಾಲೇಜು ಶಿಕ್ಷಣ ಇಲಾಖೆಯ ನಿರ್ದೇಶಕರಿಗೆ ಆದೇಶ ಕೊಟ್ಟಿದ್ದೇನೆ. ತಕ್ಷಣ ಇಲ್ಲಿಗೆ ಪ್ರಾಧ್ಯಾಪಕರನ್ನು ನೇಮಕ ಮಾಡುವುದಕ್ಕೆ ಹೇಳಿದ್ದೇನೆ. ಇನ್ನೊಂದು ವಾರದ ಒಳಗೆ ಮಾಡಿಸುತ್ತೇನೆ.

(8) ನಾಡ ಕಛೇರಿ ಅಧಿಕಾರಿಗಳಿಗೆ ವಿಧವಾ ವೇತನ ಮಂಜೂರು ಮಾಡುವ ಅಧಿಕಾರ ಕೊಡುವುದು.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ ಇಡೀ ರಾಜ್ಯದ ಗ್ರಾಮಾಂತರ ಪ್ರದೇಶದ ಜನತೆಗೆ ಅನುಕೂಲ ಆಗುವ ಒಂದು ವಿಷಯವನ್ನು ಸರಕಾರದ ಗಮನಕ್ಕೆ ತರ ಬಯಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಹೊಸದಾಗಿ ಪ್ರತಿಯೊಂದು ತಾಲ್ಲೂಕಿನಲ್ಲಿ ಒಂದು ಕಡೆ ನಾಡ ಕಚೇರಿ ಪ್ರಾರಂಭವಾಗಿದ್ದು ಅಲ್ಲಿ ಕೆಲಸ ಮಾಡುವ ಅಧಿಕಾರಿಗಳಿಗೆ ಕೇವಲ ವೃದ್ಧಾಪ್ಯ ವೇತನ ಮತ್ತು ಅಂಗವಿಕಲರ ವೇತನ ಮಂಜೂರು ಮಾಡುವ ಅಧಿಕಾರ ಕೊಟ್ಟಿದ್ದು, ಬಹು ಪ್ರಮುಖವಾದ ವಿಧವಾ ವೇತನ ಮಂಜೂರು ಮಾಡುವ ಅಧಿಕಾರ ಕೊಟ್ಟಿರುವುದಿಲ್ಲ, ಆದ್ದರಿಂದ ಜನರಿಗಾಗಿರುವ ತೊಂದರೆ ಬಗ್ಗೆ ಸರಕಾರದ ಗಮನ ಸೆಳೆಯ ಬಯಸುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ (ಕಂದಾಯ ಸಚಿವರು).—ನಾಡ ಕಚೇರಿ ಅಧಿಕಾರಿಗಳಿಗೆ ಈ ವಿಷಯದಲ್ಲಿ ಕೂಡಾ ಅಧಿಕಾರ ಕೊಡುತ್ತೇನೆ. ಅದರ ಜೊತೆಗೆ ಇನ್ನೂ ಹೆಚ್ಚಿನ ಅಧಿಕಾರ ಕೊಡತಕ್ಕಂಥ ವಿಷಯ ಸರಕಾರ ಮುಂದಿದೆ.

(9) ಹಾನಗಲ್ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳ ಮುಂಗಡ ಪತ್ರದಲ್ಲಿ ಬಂದ ನೀರಾವ ಯೋಜನೆಗಳನ್ನು ತೀವ್ರ ಜಾರಿಗೊಳಿಸುವ ಬಗ್ಗೆ

ಶ್ರೀ ಸಿ. ಎಂ. ಉದಾಸಿ (ಹಾನಗಲ್).—ಮಾನ್ಯ ಅಧ್ಯಕ್ಷರೇ, ಕಳೆದ ಮೂರು ವರ್ಷಗಳಿಂದ ಮುಂಗಡಪತ್ರದಲ್ಲಿ ಬಂದ ನೀರಾವರಿ ಯೋಜನೆಗಳಾದ ಅರ್ಯರಾಂ ಲಕ್ಮಾಪುರ ಬ್ರಿಡ್ಜ್ ಕಮ್ ಬ್ಯಾರೇಜ್ ಹಾಗೂ ಮಾಸನ ಮಕರವಳ್ಳಿ, ತಿಳವಳ್ಳಿ, ಬಸ್ಸಾಪುರ, ನೀರಾವರಿ ಯೋಜನೆಗಳನ್ನು ಕಾರ್ಯಗತಗೊಳಿಸಲು ವಿಳಂಬವಾಗುತ್ತಿದ್ದು ರೈತರ ಅವಶ್ಯ ಬೇಡಿಕೆಯಾದ ಈ ಯೋಜನೆಗಳನ್ನು ತೀವ್ರ ಜಾರಿಗೊಳಿಸಲು ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತೇನೆ.